KACM710020222023

**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.

ಉಪಸ್ಥಿತರು
ಶ್ರೀಮತಿ ಉರ್ಮಿಳ.ವಿ, ಬಿ.ಎ.ಎಲ್., ಎಲ್‌ಎಲ್‌ಬಿ.,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

ದಿನಾಂಕ ಃ **22** ನೇ ಏಪ್ರಿಲ್ **2026**

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **1282/2023**

ಫಿರ್ಯಾದಿ ಃ ರಾಜ್ಯದ ಪರವಾಗಿ ಲಕ್ಕವಳ್ಳಿ ಪೊಲೀಸರು

**(**ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು**)**

**-**ವಿರುದ್ಧ**-**

ಆರೋಪಿ/ತರು ಃ

ಮಂಜುನಾಥ ಬಿನ್ ಲೇಟ್ ರಾಮಸ್ವಾಮಿ, 42 ವರ್ಷ, ಕೂಲಿಕೆಲಸ, ವಾಸ ಃ ಮಾರಿದಿಬ್ಬ ಗ್ರಾಮ, ಲಕ್ಕವಳ್ಳಿ ಹೋಬಳಿ, ತರೀಕೆರೆ ತಾಲ್ಲೂಕು.

(ಪ್ರತಿನಿಧಿಸುವವರುಃ ಶ್ರೀ ಸಿ.ಬಿ.ವಿಶ್ವನಾಥ್, ನ್ಯಾಯವಾದಿಗಳು.)

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 03.04.2023 |
| 2 | ಅಪರಾಧ ವರದಿ ಮಾಡಿದ ದಿನಾಂಕ | 03.04.2023 |
| 3 | ಆರೋಪಿ/ತರನ್ನು ಬಂಧಿಸಿದ ದಿನಾಂಕ | -- |
| 4 | ಪಿರ್ಯಾದಿಯ ಹೆಸರು | ಹೆಚ್.ಮಂಜುನಾಥ, ಪಿ.ಎಸ್.ಐ. |
| 5 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 11.08.2025 |
| 6 | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 02.04.2026 |

Visit **ecourts.gov.in** for updates or download mobile app "**eCourts Services**" from Android or iOS

KACM710020222023

| | | |
|---|---|---|
| 7 | ಆರೋಪಿಸಲಾದ ಅಪರಾಧಗಳು | ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 |
| 8 | ನ್ಯಾಯಾಧೀಶರ ಅಭಿಪ್ರಾಯ | ಆರೋಪಿ ನಿರಪರಾಧಿ |

********

ತೀರ್ಪು

ಆರಕ್ಷಕ ಉಪನಿರೀಕ್ಷಕರು, ಲಕ್ಕವಳ್ಳಿ ಪೊಲೀಸ್ ಠಾಣೆ ಇವರು ಆರೋಪಿಯ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ-

ದಿನಾಂಕ 03.04.2023 ರಂದು ರಾತ್ರಿ 07.20 ಗಂಟೆ ಸಮಯದಲ್ಲಿ ಲಕ್ಕವಳ್ಳಿ ಪೊಲೀಸ್ ಠಾಣಾ ಸರಹದ್ದಿನ ಮಾರಿದಿಬ್ಬ ಗ್ರಾಮದಲ್ಲಿ ಆರೋಪಿಯು ತಮ್ಮ ಮನೆ ಮುಂಭಾಗದಲ್ಲಿ ಒಂದು ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ರೂ.1,054/- ಬೆಲೆ ಬಾಳುವ 90 ಎಂ.ಎಲ್. ನ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 30 ಮದ್ಯ ತುಂಬಿದ ಪೌಚ್ ಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಇಟ್ಟುಕೊಂಡಿರುತ್ತಾರೆ. ಆದ್ದರಿಂದ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

3. ಪ್ರಸ್ತುತ ಪ್ರಕರಣದಲ್ಲಿ ತನಿಖಾಧಿಕಾರಿಯು ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ಆರೋಪಿಯು ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿಗೆ ಅಭಿಯೋಜನೆಯ ಎಲ್ಲಾ ದಸ್ತಾವೇಜುಗಳನ್ನು ಭಾರತೀಯ ದಂಡ ಪಕ್ರಿಯಾ ಸಂಹಿತೆ ಕಲಂ

Visit **ecourts.gov.in** for updates or download mobile app "**eCourts Services**" from Android or iOS

KACM710020222023

207 ರ ಅನುಸಾರ ಒದಗಿಸಲಾಗಿರುತ್ತದೆ. ಆರೋಪಿಯ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ಆರೋಪಣೆಯನ್ನು ರಚಿಸಲಾಯಿತು. ಆರೋಪಿಯು ಆರೋಪಣೆಯನ್ನು ನಿರಾಕರಿಸಿ ವಿಚಾರಣೆಯನ್ನು ಬಯಸಿರುತ್ತಾರೆ.

4. ಅಭಿಯೋಜನೆಯು ಸಾಕ್ಷಿದಾರರ ಪಟ್ಟಿಯಲ್ಲಿ ತೋರಿಸಿರುವ 8 ಸಾಕ್ಷಿದಾರರಲ್ಲಿ ಅಸಾ-1 ರಿಂದ 6 ರವರ ಸಾಕ್ಷ್ಯ ಮಾಡಿಸಿರುತ್ತಾರೆ ಹಾಗೂ 5 ದಾಖಲೆಗಳನ್ನು ಹಾಜರುಪಡಿಸಿ ನಿಪಿ-1 ರಿಂದ 5 ಹಾಗೂ ಮುದ್ದೆಮಾಲು-1 ಮತ್ತು 2 ಎಂದು ಗುರ್ತಿಸಿಕೊಂಡಿರುತ್ತಾರೆ.

5. ಅಭಿಯೋಜನೆ ಪರ ಸಾಕ್ಷಿದಾರರ ವಿಚಾರಣೆ ಮುಕ್ತಾಯಗೊಂಡ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆಗಳನ್ನು ದಾಖಲು ಮಾಡಿಕೊಳ್ಳಲಾಯಿತು. ಆರೋಪಿಯು ತನ್ನ ವಿರುದ್ಧದ ಹೇಳಿಕೆಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ಅವರ ಪರ ಯಾವುದೇ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ ಮತ್ತು ಯಾವುದೇ ದಾಖಲಾತಿಗಳನ್ನು ಗುರ್ತಿಸಿಕೊಂಡಿರುವುದಿಲ್ಲ.

6. ಆರೋಪಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ನ್ನು ಪಾಲನೆ ಮಾಡಿರುತ್ತಾನೆ.

7. ಆರೋಪಿಯ ಪರ ಹಾಗೂ ಅಭಿಯೋಜಕರ ಪರ ವಾದ ಪ್ರತಿವಾದಗಳನ್ನು ಆಲಿಸಲಾಯಿತು.

8. ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುತ್ತದೆ ಃ

Visit **ecourts.gov.in** for updates or download mobile app “**eCourts Services**” from Android or iOS

KACM710020222023

1) ದಿನಾಂಕ 03.04.2023 ರಂದು ರಾತ್ರಿ 07.20 ಗಂಟೆ ಸಮಯದಲ್ಲಿ ಲಕ್ಕವಳ್ಳಿ ಪೊಲೀಸ್ ಠಾಣಾ ಸರಹದ್ದಿನ ಮಾರಿದಿಬ್ಬ ಗ್ರಾಮದಲ್ಲಿ ಆರೋಪಿಯು ತಮ್ಮ ಮನೆ ಮುಂಭಾಗದಲ್ಲಿ ಒಂದು ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ರೂ.1,054/- ಬೆಲೆ ಬಾಳುವ 90 ಎಂ.ಎಲ್. ನ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 30 ಮದ್ಯ ತುಂಬಿದ ಪೌಚ್ ಗಳನ್ನು ಇಟ್ಟುಕೊಂಡಿದ್ದು, ಆದ್ದರಿಂದ ಆರೋಪಿಯು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೆ?

2) ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯು ತಮ್ಮ ಮನೆ ಮುಂಭಾಗದಲ್ಲಿ ಒಂದು ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ರೂ.1,054/- ಬೆಲೆ ಬಾಳುವ 90 ಎಂ.ಎಲ್. ನ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 30 ಮದ್ಯ ತುಂಬಿದ ಪೌಚ್ ಗಳನ್ನು ಅಕ್ರಮವಾಗಿ ಮಾರಾಟ ಮಾಡುವ ಉದ್ದೇಶದಿಂದ ಇಟ್ಟುಕೊಂಡಿದ್ದು, ಆದ್ದರಿಂದ ಆರೋಪಿಯು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೆ?

3) ಹಾಗಿದ್ದರೆ ಯಾವ ಆಜ್ಞೆ?

9. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತವೆ ಃ

ಅಂಶ-1 ಃ ನಕಾರಾತ್ಮಕವಾಗಿ,

ಅಂಶ-2 ಃ ನಕಾರಾತ್ಮಕವಾಗಿ,

ಅಂಶ-3 ಃ ಅಂತಿಮ ಆದೇಶದಂತೆ**,**

**-ಃ ಕಾ ರ ಣ ಗ ಳು ಃ-**

10. ಅಂಶ-**1** ಮತ್ತು **2** ಃ ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಹಾಗೂ ಇವುಗಳಿಗೆ ನೀಡುವ ಕಾರಣಗಳು ಒಂದೇ

Visit **ecourts.gov.in** for updates or download mobile app "**eCourts Services**" from Android or iOS

ಆಗಿರುವುದರಿಂದ ಅಂಶಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಇವುಗಳನ್ನು ಒಟ್ಟಿಗೆ ಚರ್ಚಿಸಲಾಗಿರುತ್ತದೆ.

11. ಅಭಿಯೋಜನೆಯು ಆರೋಪಿಯ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸಲು ಪ್ರಕರಣದ ಪಿರ್ಯಾದುದಾರರು ಸಾಕ್ಷಿದಾರರಾದ ಚಾಸಾ-1/ಅಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 03.04.2023 ರಂದು ಸಂಜೆ 07.00 ಗಂಟೆಗೆ ತಾನು ಮತ್ತು ತಮ್ಮ ಸಿಬ್ಬಂದಿಗಳಾದ ಚಾಸಾ-4 ಮತ್ತು 5 ರವರು ಹಲಸೂರು ಗ್ರಾಮದಲ್ಲಿ ಗಸ್ತಿನಲ್ಲಿರುವಾಗ ಬಾತ್ಮಿದಾರರಿಂದ ಮಾರಿದಿಬ್ಬ ಗ್ರಾಮದಲ್ಲಿ ಮಂಜುನಾಥ ಬಿನ್ ರಾಮಸ್ವಾಮಿ ಎಂಬುವವರು ತಮ್ಮ ಮನೆಯ ಮುಂಭಾಗದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂಬ ಮಾಹಿತಿ ಬಂದಿದ್ದು, ಸದರಿ ಮಾಹಿತಿಯನ್ನು ಸಿಬ್ಬಂದಿಗಳಿಗೆ ತಿಳಿಸಿ ಹಲಸೂರು ಗ್ರಾಮವನ್ನು ಬಿಟ್ಟು ಮಾರಿದಿಬ್ಬಕ್ಕೆ ಸಂಜೆ 07.10 ಗಂಟೆಗೆ ತಲುಪಿ, ಅಲ್ಲಿ ಬಸ್ ನಿಲ್ದಾಣದಲ್ಲಿದ್ದ ಚಾಸಾ-2 ಮತ್ತು 3 ರವರಿಗೆ ದಾಳಿ ವಿಚಾರ ತಿಳಿಸಿ ಪಂಚರಾಗಿ ಸಹಕರಿಸಲು ಮನವಿ ಮಾಡಿಕೊಂಡು ನೋಟಿಸ್ ಜಾರಿ ಮಾಡಿದ್ದು, ನಂತರ ಅಲ್ಲಿಂದ ಮಾಹಿತಿ ಬಂದ ಸ್ಥಳಕ್ಕೆ 07.20 ಗಂಟೆಗೆ ಪಂಚರೊಂದಿಗೆ ತಲುಪಿ ಮಾರಿದಿಬ್ಬದ ಒಂದು ಮನೆಯ ಮುಂಭಾಗದಲ್ಲಿ ಆರೋಪಿಯು ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲವನ್ನು ತೆಗೆದುಕೊಂಡು ನಿಂತಿದ್ದು, ತಮ್ಮನ್ನು ನೋಡಿ ಮನೆಯ ಹಿಂಭಾಗದಲ್ಲಿ ಓಡಿ ಹೋಗಲು ಪ್ರಯತ್ನಿಸಿದ್ದು, ಚಾಸಾ-4 ರವರು ಆತನನ್ನು ಹಿಡಿದು ತನ್ನ ಮುಂದೆ ಹಾಜರುಪಡಿಸಿದ್ದು, ನಂತರ ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಮಂಜುನಾಥ್ ಬಿನ್ ರಾಮಸ್ವಾಮಿ ಎಂದು ತಿಳಿಸಿದ್ದು, ಪಂಚರ ಸಮಕ್ಷಮದಲ್ಲಿ ಪ್ಲಾಸ್ಟಿಕ್ ಚೀಲದಲ್ಲಿರುವ ಮದ್ಯದ ಪೌಚುಗಳನ್ನು ಸುರಿದು ಪರಿಶೀಲಿಸಿದಾಗ ಅದರಲ್ಲಿ 90 ಎಂ.ಎಲ್.ನ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 30 ಪೌಚುಗಳು ಇದ್ದು, ಅವುಗಳ ಅಂದಾಜು ಮೌಲ್ಯ ರೂ.1054/- ಗಳು ಎಂದು ಪಂಚರು ಅಭಿಪ್ರಾಯ ಪಟ್ಟಿರುತ್ತಾರೆ, ನಂತರ ಸದರಿ ಮದ್ಯವನ್ನು ಮಾರಾಟ ಮಾಡಲು ಯಾವುದಾದರೂ ಪರವಾನಗಿ ಇದೆಯೇ

ಎಂದು ಕೇಳಲಾಗಿ ಇಲ್ಲ ಎಂದು ತಿಳಿಸಿದ್ದು, ಅಕ್ರಮವಾಗಿ ಮದ್ಯ ಮಾರಾಟ ಮಾಡಲು ಬಂದಿರುವುದಾಗಿ ತಿಳಿಸಿರುತ್ತಾರೆ, ನಂತರ ಚಾಸಾ-4 ರವರ ಹಸ್ತ 07.30 ರಿಂದ 07.50 ರವರೆಗೆ ಅಲ್ಲಿಯೇ ವರದಿಯನ್ನು ತಯಾರಿಸಿ ಮುಂದಿನ ಕ್ರಮಕ್ಕಾಗಿ ಚಾಸಾ-4 ರವರ ಹಸ್ತ ಪ್ರಕರಣ ದಾಖಲಿಸುವಂತೆ ಠಾಣೆಗೆ ಕಳುಹಿಸಿ ಕೊಟ್ಟಿರುತ್ತೇನೆ, ಪ್ರಕರಣ 08.00 ಗಂಟೆಗೆ ದಾಖಲಾದ ನಂತರ ಪಂಚರ ಸಮಕ್ಷಮ ರಾತ್ರಿ 08.10 ರಿಂದ 09.00 ರವರೆಗೆ ಮಹಜರು ಕ್ರಮವನ್ನು ಜರುಗಿಸಿ, ಸದರಿ ಮದ್ಯವನ್ನು ಅಮಾನತ್ತು ಪಡಿಸಿಕೊಂಡು ಅದನ್ನು ಕೆಂಪು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ದಾರದಿಂದ ಹೊಲೆದು, ಅದಕ್ಕೆ ಅರಗಿನಿಂದ ಎಲ್.ಕೆ.ವಿ. ಎಂದು ಸೀಲು ಮಾಡಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇವೆ, ನಂತರ ರಾತ್ರಿ 09.15 ಗಂಟೆ ಸಮಯಕ್ಕೆ ಠಾಣೆಗೆ ಬಂದು ಆರೋಪಿ, ಮಾಲು ಮತ್ತು ಮಹಜರನ್ನು ಠಾಣಾಧಿಕಾರಿಗಳಿಗೆ ಮುಂದಿನ ಕ್ರಮ ಕೈಗೊಳ್ಳುವಂತೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಅಸಾ-1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ಅಸಾ-1 ರವರು ತಮ್ಮ ಪಾಟೀ ಸವಾಲಿನಲ್ಲಿ ಆರೋಪಿ ಪರ ವಕೀಲರ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

12. ಚಾಸಾ-2/ಅಸಾ-2 ಮತ್ತು ಚಾಸಾ-3/ಅಸಾ-3 ರವರು ಪ್ರಕರಣದ ಸ್ಥಳ ಹಾಗೂ ಅಮಾನತ್ತು ಮಹಜರು ಸಾಕ್ಷಿದಾರರಾಗಿದ್ದು, ಅಸಾ-2 ಮತ್ತು 3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ ಸುಮಾರು ವರ್ಷಗಳ ಹಿಂದೆ ಸಂಜೆ ಸಮಯದಲ್ಲಿ ತಾವು ಕೆಲಸ ಮುಗಿಸಿಕೊಂಡು ನಡೆದುಕೊಂಡು ಹೋಗುವಾಗ ಪೊಲೀಸರ ಕೋರಿಕೆಯ ಮೇರೆಗೆ ಒಂದು ದಾಖಲಾತಿಗೆ ಸಹಿ ಮಾಡಿದ್ದು, ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ತಮಗೆ ಗೊತ್ತಿರುವುದಿಲ್ಲ, ತಮ್ಮ ಸಮಕ್ಷಮದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಸಾ-2 ಮತ್ತು 3 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಅಸಾ-

Visit ecourts.gov.in for updates or download mobile app "eCourts Services" from Android or iOS

2 ಮತ್ತು 3 ರವರು ತಮ್ಮ ಪಾಟೀ ಸವಾಲಿನಲ್ಲಿ ದಿನಾಂಕ 03.042023 ರಂದು ಮಾರಿದಿಬ್ಬ ಗ್ರಾಮದ ಆರೋಪಿಯ ಮನೆಯ ಮುಂಭಾಗದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ವಿಚಾರವಾಗಿ ಪೊಲೀಸರು ಮಾಡಿದ ಮಹಜರಿಗೆ ತಾವು ಸಹಿ ಮಾಡಿದ್ದು, ಆದರೆ ಅದರಲ್ಲಿ ಬರೆದ ವಿಚಾರ ತಮಗೆ ಗೊತ್ತಿಲ್ಲ, ಆ ಸಮಯದಲ್ಲಿ ಪೊಲೀಸರು ತಮ್ಮ ಸಮಕ್ಷಮ ಆರೋಪಿಯ ಕಡೆಯಿಂದ 90 ಎಂ.ಎಲ್.ನ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 30 ಪೌಚುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆಂದರೆ ತಮಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

13. ಪ್ರಸ್ತುತ ಪ್ರಕರಣದಲ್ಲಿ ಅಸಾ-1 ರವರು ನೀಡಿದ ವರದಿಯನ್ನು ಸ್ವೀಕರಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿದ ಸಾಕ್ಷಿದಾರರಾದ ಚಾಸಾ-7/ಅಸಾ-4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 03.04.2023 ರಂದು ತಾನು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ 05.00 ಗಂಟೆ ಸಮಯದಲ್ಲಿ ಚಾಸಾ-1 ರವರು ಚಾಸಾ-4 ರವರ ಹಸ್ತ ಕಳುಹಿಸಿಕೊಟ್ಟ ವರದಿಯನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ 43/2023 ಅಬಕಾರಿ ಕಾಯ್ದೆ ಕಲಂ 32, 34 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ತಯಾರು ಮಾಡಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ, ನಂತರ ಚಾಸಾ-1 ರವರು ಮಾಲನ್ನು ಹಾಜರುಪಡಿಸಿದ್ದು, ಅದನ್ನು ಮಾಲುಪಟ್ಟಿ ಸಂಖ್ಯೆ 30/2023 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ.

14. ಪ್ರಸ್ತುತ ಪ್ರಕರಣದ ತನಿಖೆಯನ್ನು ಕೈಗೊಂಡು ದೋಷಾರೋಪಣಾ ಪತ್ರವನ್ನು ಸಲ್ಲಿಸಿದ ತನಿಖಾಧಿಕಾರಿಗಳಾದ ಚಾಸಾ-8/ಅಸಾ-5 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 04.04.2023 ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಎಸ್.ರವಿ ಅವರಿಂದ ಪಡೆದುಕೊಂಡು ಈ ಪ್ರಕರಣದಲ್ಲಿ ಪ್ರತ್ಯಕ್ಷ

ಸಾಕ್ಷಿದಾರರುಗಳಾದ ಸುರೇಶ್ ಮತ್ತು ವಸಂತಕುಮಾರ್ ರವರ ಹೇಳಿಕೆಗಳನ್ನು ದಾಖಲಿಸಿ, ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ದಿನಾಂಕ, 17.04.2023 ರಂದು ಈ ಪ್ರಕರಣದಲ್ಲಿ ಈಗಾಗಲೇ ಅಮಾನತುಪಡಿಸಿಕೊಂಡಿದ್ದ ಮದ್ಯವನ್ನು ಪೌಚುಗಳನ್ನು ರಾಸಾಯನಿಕ ತಜ್ಞರ ಪರೀಕ್ಷೆಗೆ ಚಿಕ್ಕಮಗಳೂರಿಗೆ ಠಾಣೆಯ ಹೆಡ್ ಕಾನ್ಸ್ಟೆಬಲ್-168 ಶಿವಕುಮಾರ್ ರವರ ಹಸ್ತ ಕಳುಹಿಸಿಕೊಟ್ಟಿದ್ದು, ಅಲ್ಲಿಂದ ನೀಡಿದ ಸ್ವೀಕೃತಿಯನ್ನು ಸ್ವೀಕರಿಸಿಕೊಂಡು ಕೇಸಿನ ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ, ದಿನಾಂಕ 01.06.2023 ರಂದು ಈಗಾಗಲೇ ರಾಸಾಯನಿಕ ತಜ್ಞರಿಗೆ ಕಳುಹಿಸಿಕೊಟ್ಟಿದ್ದ ರಾಸಾಯನಿಕ ವರದಿಯನ್ನು ಸ್ವೀಕರಿಸಿಕೊಂಡು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ, ಅನಂತರ ದಿನಾಂಕ 24.07.2023 ರಂದು ಈ ಪ್ರಕರಣದ ಆರೋಪಿಯು ಮದ್ಯವನ್ನು ಅಕ್ರಮವಾಗಿ ಮಾರಾಟ ಮಾಡಲು ಸೂಕ್ತ ಪರವಾನಗಿ ಇಲ್ಲದಿರುವುದು ಸಾಬೀತಾದ್ದರಿಂದ ಅವರ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34 ಅಡಿಯಲ್ಲಿ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ.

15. ಚಾಸಾ-4/ಅಸಾ-6 ರವರು ಅಸಾ-1 ರವರು ನಡೆಸಿದ ದಾಳಿಗೆ ಸಹಕರಿಸಿದ ಬಗ್ಗೆ ಸಾಕ್ಷಿದಾರರಾಗಿದ್ದು, ಸದರಿಯವರು ಅಸಾ-1 ರವರ ಸಾಕ್ಷ್ಯಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ.

16. ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯು ಹಾಜರುಪಡಿಸಿರುವ ಎಲ್ಲಾ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-4 ಮತ್ತು 5 ರವರ ಜೊತೆ ಅಬಕಾರಿ ದಾಳಿ ಮಾಡಿ ಪಂಚರಾದ ಅಸಾ-2 ಮತ್ತು 3 ರವರ ಸಮಕ್ಷಮದಲ್ಲಿ ಸ್ಥಳ ಮತ್ತು ಅಮಾನತ್ತು ಮಹಜರನ್ನು ಜರುಗಿಸಿ ಅವರ ಸಮಕ್ಷಮ ಆರೋಪಿಯ ಕಡೆಯಿಂದ 90 ಎಂ.ಎಲ್. ನ

Visit **ecourts.gov.in** for updates or download mobile app "**eCourts Services**" from Android or iOS

ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 30 ಮದ್ಯ ತುಂಬಿದ ಪೌಚ್ ಗಳನ್ನು ಅಮಾನತ್ತು ಪಡಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

17. ಕರ್ನಾಟಕ ಅಬಕಾರಿ ಕಾಯ್ದೆಯ ಅಡಿಯಲ್ಲಿ ಆರೋಪಿಯ ವಿರುದ್ಧ ಹೊರಿಸಲಾಗಿರುವ ಆರೋಪವನ್ನು ರುಜುವಾತು ಪಡಿಸಲು ಸ್ಥಳ/ಅಮಾನತ್ತು ಮಹಜರನ್ನು ನಿಸ್ಸಂಶಯಾತೀತವಾಗಿ ರುಜುವಾತು ಪಡಿಸುವ ಹೊಣೆಗಾರಿಕೆಯು ಅಭಿಯೋಜನೆಯ ಮೇಲೆ ಇರುತ್ತದೆ. ಅಸಾ-2 ಮತ್ತು 3 ರವರು ನಿಪಿ-3 ರ ಸ್ಥಳ/ ಅಮಾನತ್ತು ಮಹಜರಿನ ಸಾಕ್ಷಿದಾರರಾಗಿದ್ದು, ಸದರಿಯವರು ತಮ್ಮ ಸಾಕ್ಷ್ಯದಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಒಂದು ದಾಖಲಾತಿಗೆ ತಾವು ಸಹಿ ಮಾಡಿದ್ದು, ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ತಮಗೆ ಗೊತ್ತಿರುವುದಿಲ್ಲ, ತಮ್ಮ ಸಮಕ್ಷಮದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದು, ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಿದಾಗಲೂ ಸಹ ಅಸಾ-2 ಮತ್ತು 3 ರವರ ಸಾಕ್ಷ್ಯದಲ್ಲಿ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾದ ಅಂಶಗಳನ್ನು ಹೊರತೆಗೆಯುವಲ್ಲಿ ವಿಫಲರಾಗಿರುತ್ತಾರೆ. ಸದರಿ ಅಸಾ-2 ಮತ್ತು 3 ರವರ ಸಾಕ್ಷ್ಯದ ಅಂಶಗಳನ್ನು ಗಮನಿಸಿದಾಗ ಸದರಿಯವರ ಸಾಕ್ಷ್ಯವು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಇರುವುದಿಲ್ಲ, ಆದ್ದರಿಂದ ಅಭಿಯೋಜನೆಯ ಪ್ರಕಾರ ಘಟನೆ ನಡೆಯಿತು ಎಂದು ಹೇಳುವ ಸ್ಥಳದಲ್ಲಿ ಮುದ್ದೆಮಾಲು-1 ಮತ್ತು 2 ನ್ನು ಆರೋಪಿಯ ಕಡೆಯಿಂದ ಅಮಾನತ್ತು ಪಡಿಸಿಕೊಂಡ ಬಗ್ಗೆ ಸಂಶಯವುಂಟಾಗುತ್ತದೆ. ಆದ್ದರಿಂದ ಅಭಿಯೋಜನೆಯು ನಿಪಿ-3 ರ ಸ್ಥಳ/ಅಮಾನತ್ತು ಮಹಜರನ್ನು ನಿಸ್ಸಂಶಯತೀತವಾಗಿ ರುಜುವಾತು ಪಡಿಸಲು ವಿಫಲವಾಗಿದ್ದು, ಸದರಿಯವರ ಸಾಕ್ಷ್ಯವು ಆರೋಪಿಯ ಮೇಲೆ ಆರೋಪಿಸಿದ

Visit **ecourts.gov.in** for updates or download mobile app "**eCourts Services**" from Android or iOS

ಆರೋಪಗಳನ್ನು ರುಜುವಾತುಪಡಿಸಲು ಅಭಿಯೋಜನೆಯ ಪ್ರಕರಣಕ್ಕೆ ಸಹಾಯಕವಾಗುವುದಿಲ್ಲ ಎಂದು ಅಭಿಪ್ರಾಯ ಪಡುತ್ತೇನೆ.

18. ಅಸಾ-6 ರವರು ಅಸಾ-1 ರವರು ನಡೆಸಿದ ದಾಳಿಗೆ ಸಹಕರಿಸಿದ ಸಾಕ್ಷಿದಾರರಿದ್ದು, ಅಸಾ-4 ರವರು ಅಸಾ-1 ರವರು ನೀಡಿದ ವರದಿಯನ್ನು ಸ್ವೀಕರಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿದ ಸಾಕ್ಷಿದಾರರಾಗಿದ್ದು ಹಾಗೂ ಅಸಾ-5 ರವರು ಪ್ರಸ್ತುತ ಪ್ರಕರಣದ ತನಿಖೆಯನ್ನು ಕೈಗೊಂಡು ದೋಷಾರೋಪಣಾ ಪತ್ರವನ್ನು ಸಲ್ಲಿಸಿದ ತನಿಖಾಧಿಕಾರಿಗಳಾಗಿರುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ ಅಸಾ-1, 4 ರಿಂದ 6 ರವರು ಅಧಿಕಾರ ವರ್ಗದ ಸಾಕ್ಷಿದಾರರಾಗಿದ್ದು ಕೇವಲ ಅವರ ಸಾಕ್ಷ್ಯದಿಂದ ಮಾತ್ರ ಆರೋಪಿಯ ಮೇಲೆ ಆರೋಪಿಸಿದ ಆರೋಪಗಳನ್ನು ರುಜುವಾತುಪಡಿಸಲು ಸಾಕಾಗುವುದಿಲ್ಲ. ಏಕೆಂದರೆ ಈ ಪ್ರಕರಣದಲ್ಲಿ ಸ್ವತಂತ್ರ ಸಾಕ್ಷಿದಾರರು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿಯದೇ ಇರುವುದರಿಂದ ಅಭಿಯೋಜನೆಯು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿನ ಒಳಾಂಶಗಳನ್ನು ನಿಸ್ಸಂಶಯತೀತವಾಗಿ ಸಾಬೀತು ಪಡಿಸಲು ವಿಫಲವಾಗಿರುತ್ತಾರೆ. ಆದ್ದರಿಂದ ಸಂಶಯದ ಲಾಭವನ್ನು ಆರೋಪಿಗೆ ನೀಡಿ ಆರೋಪಿಯು ಬಿಡುಗಡೆಗೆ ಅರ್ಹರೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟು, ಅಂಶ-1 ಮತ್ತು 2 ನ್ನು ನಕಾರಾತ್ಮಕ ಎಂದು ಉತ್ತರಿಸಿರುತ್ತೇನೆ .

19. **ಅಂಶ - 3** ಃ ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ ಃ

**-ಃ ಆದೇಶ ಃ-**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯನ್ನು ಕರ್ನಾಟಕ ಅಬಕಾರಿ ಕಾಯ್ದೆ

Visit **ecourts.gov.in** for updates or download mobile app "**eCourts Services**" from Android or iOS

ಕಲಂ 32 ಮತ್ತು 34 ರಡಿಯಲ್ಲಿನ ಆರೋಪಗಳಿಂದ ದೋಷಮುಕ್ತಗೊಳಿಸಲಾಗಿದೆ.

ಆರೋಪಿಯ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್ ಈ ಆದೇಶವಾದ ದಿನದಿಂದ ರದ್ದುಗೊಳಿಸಲಾಗಿದೆ .

ಆರೋಪಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರಡಿಯಲ್ಲಿ ಸಲ್ಲಿಸಿದ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್ ಈ ಆದೇಶವಾದ ದಿನದಿಂದ ಆರು ತಿಂಗಳುವರೆಗೆ ಊರ್ಜಿತವಾಗಿರುತ್ತದೆ.

ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿರುವ ಮುದ್ದೆಮಾಲು-1 ಮತ್ತು 2 ಬೆಲೆ ಬಾಳದ ವಸ್ತುಗಳಾದ್ದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸುವಂತೆ ಈ ಮೂಲಕ ಕಛೇರಿಗೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ, ಓದಿ ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ 22 ನೇ ಏಪ್ರಿಲ್ 2026 ರಂದು ಘೋಷಿಸಲಾಯಿತು)

URMILA V

Digitally signed by URMILA V
Date: 2026.04.22 15:22:29 +0530

ಸಹಿ
**(**ಉರ್ಮಿಳ**.**ವಿ**)**
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ**.**ದ**.**ನ್ಯಾ**.**ದಂ**.,** ತರೀಕೆರೆ**.**

<u>ಅನುಬಂಧ</u>

<u>ಅಭಿಯೋಜನೆಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ ಃ-</u>

ಅಸಾ-1 ಃ ಹೆಚ್.ಮಂಜುನಾಥ್
ಅಸಾ-2 ಃ ವಿಜಯ್
ಅಸಾ-3 ಃ ವೆಂಕಟೇಶ
ಅಸಾ-4 ಃ ಟಿ.ಆರ್.ರವಿ
ಅಸಾ-5 ಃ ಸಿಖಂದರ್ ಪಾಷ.ಡಿ.ಎನ್.
ಅಸಾ-6 ಃ ಬಿ.ಎಲ್.ಸುರೇಶ್

Visit **ecourts.gov.in** for updates or download mobile app “**eCourts Services**” from Android or iOS

KACM710020222023

<u>ಅಭಿಯೋಜನೆಯ ಪರ ಗುರುತು ಮಾಡಲ್ಪಟ್ಟ ದಾಖಲಾತಿಗಳು ಃ-</u>

| | | |
|---|---|---|
| ನಿಪಿ-1 | ಃ | ದೂರು/ವರದಿ |
| ನಿಪಿ-2 | ಃ | ಪಂಚರಿಗೆ ನೀಡಿದ ನೋಟೀಸ್ |
| ನಿಪಿ-3 | ಃ | ಮಹಜರು |
| ನಿಪಿ-4 | ಃ | ಪ್ರಥಮ ವರ್ತಮಾನ ವರದಿ |
| ನಿಪಿ-5 | ಃ | ರಾಸಾಯನಿಕ ಪರೀಕ್ಷಾ ವರದಿ |

<u>ಅಭಿಯೋಜನೆಯ ಪರ ಗುರುತು ಮಾಡಲ್ಪಟ್ಟ ಮುದ್ದೆಮಾಲುಗಳು ಃ-</u>

ಮುದ್ದೆಮಾಲು-1 ಮತ್ತು 2 ಃ ಒಂದು ಕೆಂಪು ಬಣ್ಣದ ಕೈಚೀಲ ಮತ್ತು 90 ಎಂ.ಎಲ್. ನ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 30 ಪೌಚುಗಳು

<u>ಆರೋಪಿ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ ಃ-</u>

- ಇಲ್ಲ -

<u>ಆರೋಪಿ ಪರ ಗುರುತು ಮಾಡಲ್ಪಟ್ಟ ದಾಖಲಾತಿಗಳು ಃ-</u>

- ಇಲ್ಲ -

ಸಹಿ

URMILA V

Digitally signed by URMILA V
Date: 2026.04.22 15:22:14 +0530

**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

Visit **ecourts.gov.in** for updates or download mobile app "**eCourts Services**" from Android or iOS